**Saturday 09th November 2024**

**8th International Conference at RVCE Campus**

# ಪ್ರಜಾ ಪ್ರಗತಿ

# ಆರ್‌ವಿಸಿಇ ಕ್ಯಾಂಪಸ್‌ನಲ್ಲಿ 8ನೇ ಅಂತರಾಷ್ಟ್ರೀಯ ಸಮ್ಮೇಳನ

ಬೆಂಗಳೂರು : ಮೈಸೂರು ಮುಖ್ಯರಸ್ತೆಯಲ್ಲಿರುವ ಆರ್ .ವಿ.ಸಿ.ಇ ಕ್ಯಾಂಪಸ್ ನ ಐಇಎಂ ಆಡಿಟೋರಿಯಮ್ ನಲ್ಲಿ 8ನೇ ಐಇಇಇ ಅಂತರಾಷ್ಟ್ರೀಯ ಸಮ್ಮೇಳನ ಸಿಎಸ್ ಐಟಿಎಸ್‌ಎಸ್ - 2024 ಕಾರ್ಯಕ್ರಮದ ಅಂಗವಾಗಿ ಮೂರು ದಿನಗಳ ಸಮ್ಮೇಳನ ಹಮ್ಮಿಕೊಳ್ಳಲಾಗಿತ್ತು. ಕಂಪ್ಯೂಟೇಶನಲ್ ಸಿಸ್ಟಮ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸುಸ್ಥಿರ ಪರಿಹಾರಗಳ ಕುರಿತು ಹಮ್ಮಿಕೊಂಡಿದ್ದ ಸಮ್ಮೇಳನದ ಉದ್ಘಾಟನೆಯನ್ನು ಯುಎಸ್‌ಎ ಮಿಯಾಮಿ ಸ್ಕೂಲ್ ಆಫ್ ಕಂಪ್ಯೂಟಿಂಗ್ ಮತ್ತು ಮಾಹಿತಿ ವಿಜ್ಞಾನ ಫ್ಲೋರಿಡಾ ಅಂತರಾಷ್ಟ್ರೀಯ ವಿಶ್ವವಿದ್ಯಾಲಯದ ರೈಡರ್ ಪ್ರೊಫೆಸರ್ ಮತ್ತು ನಿರ್ದೇಶಕ ಪ್ರೊ.ಎಸ್.ಎಸ್ .ಅಯ್ಯಂಗಾರ್ ನೆರವೇರಿಸಿದರು .ನಂತರ ಮಾತನಾಡಿದ ಅವರು ದೇಶಾದ್ಯಂತ ಹಲವು ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿದ್ದೇನೆ,ಆರ್.ವಿ.ಸಿ.ಇ ನುರಿತ ಪ್ರಾಧ್ಯಾಪಕರಿಂದ ಗುಣಮಟ್ಟದ ಭೋಧನೆ ವಿದ್ಯಾರ್ಥಿಗಳಿಗೆ ಒದಗಿಸುತ್ತಿದೆ. ಯಾವ ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದೇನೆ, ಅಲ್ಲಿರುವ ಬೋಧಕರು ಯಾವ್ಯಾವ ವಿಷಯಗಳಲ್ಲಿ ಎಷ್ಟು ಪರಿಣಿತಿ



ಹೊಂದಿದ್ದಾರೆ, ಶಿಕ್ಷಣದ ಹೊರತುಪಡಿಸಿ ಎಂತಹ ಕೌಶಲ್ಯಾಭಿವೃದ್ಧಿ ಕಲಿಕೆಗೆ ಒತ್ತು ನೀಡುತ್ತಿದ್ದಾರೆ ಎಂಬುದರ ಮೇಲೆ ವಿದ್ಯಾರ್ಥಿಗಳ ಭವಿಷ್ಯ ನಿರ್ಧಾರವಾಗಲಿದೆ ಎಂದರು.ಯುಎಸ್‌ಎ ಮೈಲಾಹ್ ಸಿಯಾಟಲ್ ಸಹ-ಸಂಸ್ಥಾಪಕ ಮತ್ತು ಸಿಎಂಒ ಚೈತ್ರಾ ವೆದುಲ್ಲಪಲ್ಲಿ ವಿದ್ಯಾರ್ಥಿಗಳನ್ನು ಹುರಿದುಂಬಿಸಿ ಮಾತನಾಡಿ ಶಿಕ್ಷಣದ ಭವಿಷ್ಯವನ್ನು ರೂಪಿಸುವಲ್ಲಿ ತಂತ್ರಜ್ಞಾನದ ಪಾತ್ರ ಮಹತ್ವದ್ದಾಗಿದೆ.ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ ಅಳವಡಿಕೆ ಶೈಕ್ಷಣಿಕ ಪ್ರಗತಿಗೆ ಪೂರಕ ವಾತಾವರಣ ಸೃಷ್ಟಿ ಮಾಡುತ್ತದೆ ಎಂದರು.ಸಮ್ಮೇಳನದಲ್ಲಿ ವಿವಿಧ ಕಾಲೇಜುಗಳಿಂದ 1100ಕ್ಕೂ ಹೆಚ್ಚು ಅರ್ಜಿ ಸಲ್ಲಿಕೆಯಾದ ಹಿನ್ನೆಲೆಯಲ್ಲಿ 815 ವಿದ್ಯಾರ್ಥಿಗಳಿಗೆ ಮಾತ್ರ ಭಾಗವಹಿಸಲು ಅವಕಾಶ ಕಲ್ಪಿಸಲಾಗಿತ್ತು.ಡಾರ್ಟ್ಮಂಡ್ ನ ಯುನಿವರ್ಸಿಟಿ ಆಫ್ ಅಪ್ಲೈಡ್ ವಿಜ್ಞಾನ ಮತ್ತು ಕಲೆ ಕಾಲೇಜಿನ ಪ್ರೊಫೆಸರ್ ಡಾ.-ಇಂಗ್ ವಿನೋದ್ ರಾಜಮಣಿ, ಐಇಇಇ ಬೆಂಗಳೂರು ವಿಭಾಗ ಐಐಎಸ್‌ಇ ಬೆಂಗಳೂರು ಅಧ್ಯಕ್ಷ ಹಾಗೂ ಪ್ರಾಧ್ಯಾಪಕ ಡಾ.ಟಿ.ಶ್ರೀನಿವಾಸ್, ಆರ್.ಎಸ್. ಎಸ್.ಟಿ ಅಧ್ಯಕ್ಷ ಡಾ.ಎಂ.ಪಿ.ಶ್ಯಾಮ್, ಪ್ರಾಂಶುಪಾಲ ಡಾ.ಕೆ.ಎನ್.ಸುಬ್ರಮಣ್ಯ, ಉಪ ಪ್ರಾಂಶುಪಾಲೆ ಡಾ.ಗೀತಾ, ಹೆಚ್.ಒ.ಡಿ.ಡಾ.ಎಂ.ಕೃಷ್ಣ ಉಪಸ್ಥಿತರಿದ್ದರು.

Bangalore Edition
Nov 09, 2024 Page No. 5
Powered by: erelego.com